# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 942 |
| ಸದಸ್ಯರ ಹೆಸರು | : | ಶ್ರೀ ಎಸ್.ಎಲ್. ಭೋಜೇಗೌಡ |
| ಉತ್ತರಿಸುವ ದಿನಾಂಕ | : | 22-02-2024. |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮೀಸಲಾತಿ ಎಂದರೇನು; ಇದರ ಇತಿಹಾಸವೇನು; ರಾಜ್ಯ ಸರ್ಕಾರದ ಹುದ್ದೆಗಳಲ್ಲಿ ಮೀಸಲಾತಿಯನ್ನು ಪ್ರಾರಂಭದಿಂದ ಇಲ್ಲಿಯವರೆಗೂ ಯಾವ ರೀತಿ ಜಾರಿಗೊಳಿಸಲಾಗಿದೆ; ಕಾಲಾನುಕ್ರಮದ ಅನುಸಾರ ಮಾಹಿತಿ ನೀಡುವುದು;</td><td>ಸಮಾಜ ಕಲ್ಯಾಣ ಇಲಾಖೆ:-<br>ಭಾರತ ಸಂವಿಧಾನ ಜಾರಿಗೆ ಬಂದಾಗಿನಿಂದ ಸಂವಿಧಾನದ ಅನುಚ್ಛೇದ 15(4) ಮತ್ತು 16(4) ರಡಿಯಲ್ಲಿ ಶಿಕ್ಷಣ ಮತ್ತು ಉದ್ಯೋಗ ಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾತಿ ಕಲ್ಪಿಸಲಾಗಿದೆ. ಈ ಹಿಂದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಯಾವುದೇ ಮೀಸಲಾತಿ ಇಲ್ಲದ ಕಾರಣ ಶಿಕ್ಷಣ ಮತ್ತು ಉದ್ಯೋಗದಲ್ಲಿ ಪ್ರಾತಿನಿಧ್ಯ ನೀಡುವ ಹಿನ್ನೆಲೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.<br>1950ನೇ ಸಾಲಿನಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಒಟ್ಟಾರೆ 18% ತದನಂತರ ಪರಿಶಿಷ್ಟ ಜಾತಿಗೆ 15% ಹಾಗೂ ಪರಿಶಿಷ್ಟ ಪಂಗಡದವರಿಗೆ 3% ಎಂದು ಮೀಸಲಾತಿ ಕಲ್ಪಿಸಲಾಗಿದೆ. 2022ನೇ ಸಾಲಿನಿಂದ ಸದರಿ ಮೀಸಲಾತಿಯನ್ನು ಪರಿಶಿಷ್ಟಜಾತಿಗೆ 17% ಮತ್ತು ಪರಿಶಿಷ್ಟ ಪಂಗಡದವರಿಗೆ 7%ಕ್ಕೆ ಹೆಚ್ಚಿಸಲಾಗಿದೆ.<br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:-<br>ರಾಜ್ಯ ಸರ್ಕಾರದ ಹುದ್ದೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ಹೊರಡಿಸಿರುವ ಮೀಸಲಾತಿಯ ವಿವರಗಳನ್ನು ಅನುಬಂಧ-1 ರಲ್ಲಿ</td></tr>
<tr><td>ಆ)</td><td>ರಾಜ್ಯ ಸರ್ಕಾರಗಳ ಸಿಬ್ಬಂದಿ ನೇಮಕಾತಿಗಳಲ್ಲಿ ಪ್ರಸ್ತುತ ಜಾರಿಯಲ್ಲಿರುವ ಲಂಬ ಹಾಗೂ ಸಮತಳ ಮೀಸಲಾತಿಗಳಾವುವು; (ವಿವರವಾಗಿ ವರ್ಗವಾರು ಮಾಹಿತಿ ನೀಡುವುದು)</td><td>ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 01 ಸೆಹಿಮ 2022 ಬೆಂಗಳೂರು ದಿನಾಂಕ: 28.12.2022ರನ್ವಯ ಲಂಬ (The vertical reservation) ನ್ನು ಕೆಳಗಿನಂತೆ ನಿಗಧಿಪಡಿಸಲಾಗಿದೆ.<br>
<table>
<tr><th></th><th></th><th>ಶೇಕಡವಾರು ಮೀಸಲಾತಿ</th></tr>
<tr><td>I</td><td>ಪ್ರವರ್ಗ- I</td><td>4</td></tr>
<tr><td>II(ಎ)</td><td>ಪ್ರವರ್ಗ-II(ಎ)</td><td>15</td></tr>
<tr><td>II(ಬಿ)</td><td>ಪ್ರವರ್ಗ-II(ಬಿ)</td><td>4</td></tr>
<tr><td>III(ಎ)</td><td>ಪ್ರವರ್ಗ-III(ಎ)</td><td>4</td></tr>
<tr><td>III(ಬಿ)</td><td>ಪ್ರವರ್ಗ-III(ಬಿ)</td><td>5</td></tr>
<tr><td>ಪ.ಜಾತಿ</td><td>ಪರಿಶಿಷ್ಟ ಜಾತಿ</td><td>17</td></tr>
<tr><td>ಪ.ಪಂಗಡ</td><td>ಪರಿಶಿಷ್ಟ ಪಂಗಡ</td><td>7</td></tr>
<tr><td>ಸಾ.ಅ</td><td>ಸಾಮಾನ್ಯ ಅರ್ಹತೆ</td><td>44</td></tr>
<tr><td></td><td>ಒಟ್ಟು</td><td>100</td></tr>
</table></td></tr>
</table>

| | | |
|---|---|---|
| | | ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 02 ಸೆಹಿಮ 2023 ದಿನಾಂಕ: 08.03.2023 ರಲ್ಲಿ ಕೆಳಕಂಡಂತೆ ಸಮತಲ (Horizontal Reservation) ಮೀಸಲಾತಿಯನ್ನು ಕಲ್ಪಿಸಲಾಗಿದೆ.<br>1. ಮಾಜಿ ಸೈನಿಕರು – 10%<br>2. ಅಂಗವಿಕಲ ಅಭ್ಯರ್ಥಿ - 4% - (ವೃಂದ ಎ & ಬಿ- 4% ಮತ್ತು ಬಿ & ಸಿ – 5%)<br>3. ಯೋಜನೆಗಳಿಂದ ನಿರಾಶ್ರಿತಗೊಂಡವರು – 5%<br>4. ಮಹಿಳಾ ಅಭ್ಯರ್ಥಿ - 33%<br>5. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ – 5%<br>6. ತೃತೀಯ ಲಿಂಗಿಗಳು – 1%<br>7. ಗ್ರಾಮೀಣ ಅಭ್ಯರ್ಥಿ - 25%<br><br>ಆದೇಶಗಳ ಪ್ರತಿಯನ್ನು ಅನುಬಂಧ-2ರಲ್ಲಿ ನೀಡಿದೆ. |
| ಇ) | ಸದರಿ ಮೀಸಲಾತಿಯಲ್ಲಿ ಬರುವ ರೋಸ್ಟರ್ ಬಿಂದುಗಳು ಎಂದರೇನು; ಇವುಗಳನ್ನು ಯಾವ ರೀತಿ ವರ್ಗೀಕರಿಸಲಾಗಿದೆ; (ವಿವರವಾದ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 01 ಸೆಹಿಮ 2022, ದಿನಾಂಕ: 28.12.2022ರನ್ವಯ ಮೀಸಲಾತಿ ಪ್ರತಿ ಶತದಂತೆ ನೇಮಕಾತಿಗಾಗಿ ಒಂದು ವರ್ತುಲದಲ್ಲಿ 100 ಬಿಂದುಗಳನ್ನು ನಿಗದಿಪಡಿಸಿದ್ದು, ಅದರ ಪೈಕಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಬಿಂದುಗಳನ್ನು ಗುರುತಿಸಲಾಗಿದೆ. 100 ಬಿಂದುಗಳು ಪೂರ್ಣಗೊಂಡ ನಂತರ ಅದೇ ರೀತಿಯಲ್ಲಿ ಎರಡನೇ ವರ್ತುಲ ಪ್ರಾರಂಭವಾಗುತ್ತದೆ.<br><br>ಮೀಸಲಾತಿ ಪ್ರತಿಶತಗಳಂತೆ ರೋಸ್ಟರ್ ಬಿಂದುಗಳನ್ನು ಗುರುತಿಸಲಾಗಿದೆ. |
| ಈ) | ಈ ಮೀಸಲಾತಿ ಹಾಗೂ ರೋಸ್ಟರ್ ಬಿಂದುಗಳನ್ನು ಯಾವ ತಳಹದಿ ಅಥವಾ ಆಧಾರ ಅಥವಾ ಯಾವ ಆಯೋಗದ ವರದಿಯ ಮೇಲೆ ನಿರ್ಣಯಿಸಲಾಗಿದೆ; (ವಿವರವಾಗಿ ಪ್ರಾರಂಭದಿಂದ ಇಲ್ಲಿಯವರೆಗೂ ಮಾಹಿತಿ ನೀಡುವುದು) | |
| ಉ) | ಮೀಸಲಾತಿ ಸಂಬಂಧ ಇಲ್ಲಿಯವರೆಗೂ ಯಾವ ಯಾವ ಆಯೋಗದ ವರದಿಗಳನ್ನು ಸ್ವೀಕರಿಸಲಾಗಿದೆ? | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂಬಂಧಪಟ್ಟಂತೆ, ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ಕುರಿತು ನಿವೃತ್ತ ನ್ಯಾಯಾಧೀಶರಾದ ಶ್ರೀ. ನಾಗಮೋಹನ ದಾಸ್ ರವರ ಆಯೋಗದ ವರದಿಯನ್ವಯ ಅನುಷ್ಠಾನಗೊಳಿಸಲಾಗಿದೆ.<br><br>ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದ ಆಯೋಗಗಳ ವಿವರಗಳನ್ನು ಅನುಬಂಧ-3 ರಲ್ಲಿ ನೀಡಿದೆ. |

**No: SWD/103/SLP/2024**

(**ಡಾ||ಹೆಚ್.ಸಿ.ಮಹದೇವಪ್ಪ**)
ಸಮಾಜ ಕಲ್ಯಾಣ ಸಚಿವರು.

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 942 ಕ್ಕೆ ಅನುಬಂಧ-1**
**ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ನೇರ ನೇಮಕಾತಿಯಲ್ಲಿ ಮೀಸಲಾತಿ ವಿವರ**

1) ಸರ್ಕಾರದ ಆದೇಶ ಸಂಖ್ಯೆ: DPAR 1 SBC ದಿನಾಂಕ: 04-03-1977ರನ್ವಯ ಹಿಂದುಳಿದ ವರ್ಗಗಳ ಮೀಸಲಾತಿ ವಿವರ

| Sl No | Other backward classes | Percentage |
|---|---|---|
| 01 | Backward communities | 20% |
| 02 | Backward Caste | 10% |
| 03 | Backward Tribe | 5% |
| 04 | Special Group | 5% |
| | **Total** | **38%** |

2) ಸರ್ಕಾರದ ಆದೇಶ ಸಂಖ್ಯೆ: SWL 123 BCA 79 ದಿನಾಂಕ: 01-05-1979 ರನ್ವಯ ಹಿಂದುಳಿದ ವರ್ಗಗಳ ಮೀಸಲಾತಿ ವಿವರ

| Sl No | Other backward classes | Percentage |
|---|---|---|
| 01 | Backward communities | 18% |
| 02 | Backward Caste | 10% |
| 03 | Backward Tribe | 5% |
| | **Total** | **33** |

3) ಸರ್ಕಾರದ ಆದೇಶ ಸಂಖ್ಯೆ: SWL 66 BCA 86 ದಿನಾಂಕ: 13-10-1986 ರನ್ವಯ ಹಿಂದುಳಿದ ವರ್ಗಗಳ ಮೀಸಲಾತಿ ವಿವರ

| Sl No | Backward classes | Percentage |
|---|---|---|
| 01 | Group-A | 5% |
| 02 | Group-B | 13% |
| 03 | Group-C | 16% |
| 04 | Group-D | 11% |
| 05 | Group-E (Backward Special group) | 5% |
| | **Total** | **50%** |

4) ಸರ್ಕಾರದ ಆದೇಶ ಸಂಖ್ಯೆ: SWL 150 BCA 94 ದಿನಾಂಕ: 17-09-1994 ರನ್ವಯ ಹಿಂದುಳಿದ ವರ್ಗಗಳ ಮೀಸಲಾತಿ ವಿವರ

| Sl No | Category | Percentage |
|---|---|---|
| 01 | Category-I | 4% |
| 02 | Category-II((a) | 15% |
| 03 | Category –II(b) | 4% |
| 04 | Category –III(a) | 4% |
| 05 | Category-III(b) | 5% |
| | **Total** | **32%** |